# ಹಿಜ್ ಮದರ್ ವಾಜ್ ಮಾಯ್...

ಎಲವಿಗಿ ರೈಲ್ವೇ ಸ್ಟೇಶನ್ನದಾಗ ಆ ರೈತ ಮನಶ್ಯಾ ಭಾಳ ಉಮೇದಿಲೇ ಚಕ್ಕಡಿ ಕೊಳ್ಳ ಹರದು, ಮೇಲ್ ಗಾಡಿ ಬರೂ ದಾರಿ ನೋಡ್ತಿದ್ದಾ. ಐದು ವರ್ಷದ ಮ್ಯಾಲ ಮಗಾ ಇಂಗ್ಲೆಂಡದಿಂದ ಬರಾಕ್ಹತ್ಯಾನನ್ನೂ ಉಮೇದು ಒಂದು ಕಡೆ ಆದ್ರ, ಮತ್ತೊಂದ್ ಕಡೆ ಅವನ ಮದುವಿ ಮುಂದಿನ ವಾರಾನs ಫಿಕ್ಸ್ ಆಗಿದ್ದು, ಸ್ವಾದರ ಸೊಸೀನs ಮನೀಗೆ ಸೊಸಿ ಆಗಿ ಬರಾಕ್ಹತ್ಯಾಳನ್ನೂದು ಅಂವಗ ಇನ್ನೂ ಹೆಚ್ಚಿನ ಖುಷಿ ಕೊಟ್ಟಿದ್ವು. ತನ್ನ ಮದುವೀಗೆ ಇಂಗ್ಲೆಂಡ್ ದೇಶದ ಗೆಳ್ಯಾನ್ರೂ ಕರಕೊಂಡ ಬಂದಿದ್ದ ಡಾ. ಮಲ್ಲೇಶ, (ಮೂಲ ಹೆಸರು, ಮಲ್ಲಪ್ಪ) ಟ್ರೇನು ಸ್ಟೇಶನ್ನದಾಗ ನಿಂತ ಕೂಡ್ಲೇ ಅವರ್ನೆಲ್ಲಾ ಕರಕೊಂಡು ಕೆಳಗಿಳದಾ.

ಮಗನ ಸೂಟು, ಬೂಟು, ಚಸ್ಮಾ, ಮತ್ತ ಜೊತಿಗಿದ್ದ ಅವನ ಗೆಳ್ಯಾನ್ರ ನೋಡಿದ ಆ ರೈತ ಮನಶ್ಯಾನ ಕಣ್ಣು ತುಂಬಿ ಬಂದ್ವು. ಮಗನ್ನ ಸಾಲೀ ಕಲ್ಸಿದ್ದಕ್ಕ ಜಲ್ಮ ಸಾರ್ಥಕ ಅನಿಸ್ತು. ಬಂದವ್ರು ಮತ್ತು ಮಗನ ಎಲ್ಲಾ ಸಾಮಾನಾನೂ ತಾನs ಇಳಿಸಿ, ಚಕ್ಕಡಿಗೆ ಹಾಕಿದ. “ಬರ್ರಿ, ಬರ್ರಿ ಗಾಡಿಯೊಳಗ ಹತ್ತರಿ” ಅಂತ ಕಕ್ಕುಲಾತಿಯಿಂದ ಅವರ್ನೆಲ್ಲಾ ಗಾಡ್ಯಾಗ ಕುಂದರ್ಸ್ಕೊಂಡು “ಹಾ.. ನಡಿ ನಡೀ ” —ಅಂತ ಎತ್ತೊಗೋಳ್ನ ಬೆದರ್ಸ್ಕೊಂತ ಊರ ಕಡೆ ಚಕ್ಕಡಿ ಓಡ್ಸಾಕ್ಹತ್ತಿದ.

ಗಾಡಿ ಓಡ್ಸೂ ಮನಶಾನ ಉಮೇದು, ಖುಷಿ, ಹುರುಪು —ಇವನ್ನೆಲ್ಲಾ ನೋಡಿದ ಇಂಗ್ಲೆಂಡದ ಹುಡುಗೂರ್ಗೆ ವಿಚಿತ್ರ ಕುತೂಹಲ! ಎತ್ತರ ಆಳು, ಹುರಿ ಮೀಸಿ, ದಪ್ಪಕಟ್ಟು ಮೈ, ಮಕದ ಮ್ಯಾಲಿನ ಹೂ ನಗಿ ಒಟ್ಟs ಕಟದ ಬಗರಿ ಹಂಗ್ ಇದ್ದ ಅಂವಾ ಯಾರನ್ನೂದನ್ನ ತಿಳಕೋಬೇಕನ್ನೂ ಹುಮ್ಮಸ್ಸಿಂದ ಒಬ್ಬ ಹುಡುಗಾ, “ಹಾಯ್ ಡಾ. ಮಲ್ಲೇಶ್, ಹೂ ಈಜ್ ದಿಸ್ ನೈಸ್ ಜಂಟಲ್ಮನ್? ಹೀ ಈಸ್ ಸೋ ಕ್ರೇಝಿ ಅಬೌಟ್ ಯೂ !” ಅಂತ ಕೇಳಿಬಿಟ್ಟ.

ಡಾ. ಮಲ್ಲೇಶ್ ಒಂದಿಷ್ಟು ಗಲಿಬಿಲಿಗೆ ಬಿದ್ದ. ‘ಇಂಥಾ ಹಳ್ಳಿ ಗಂವಾರಾ ನನ್ನಪ್ಪ ಅಂತ ಹೇಳಿದ್ರ ಇವರೆಲ್ಲಾ ಏನ್ ತಿಳಕೊಂತಾರೋ ಏನೊ? ಈ ಮಾರಾಯನ್ನ ನೋಡಿದ್ರ ಕೆಟ್ಟ ಒರಟ. ಏನ್ ಮಾಡೂದೀಗ? ಇಂವಾ ಯಾರಂತ ಹೇಳ್ಲಿ?...’ ಅಂತ ಮನಸಿನ್ಯಾಗs ವಿಚಾರಾ ಮಾಡ್ಕೊಂತs, ಹೆಂಗೂ ಅಂವಗ ಇಂಗ್ಲಿಷ್ ತಿಳಿಯೂದುಲ್ಲ ತಡಿ ಅಂದವ್ನs, “ಹಾಯ್, ಯೂ ಆಸ್ಕ್ಡ ಅಬೌಟ್ ದಿಸ್ ಮ್ಯಾನ್, ಯೂ ನೋ? ಹೀ ಈಸ್ ಅವರ್ ಹೌಸ್ ಸರ್ವಂಟ್. ದಟ್ಸ್ ವೈ ಹೀ ಹ್ಯಾಸ್ ಕಮ್ ಫಾರ್ ಪಿಕ್ಕಿಂಗ್ ಅಪ್ ಅಸ್ ” —ಅಂತ ಸಹಜ ಹೇಳಿಬಿಟ್ಟ!!

